**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. 277 /2018**

**ಫಿರ್ಯಾದುದಾರರುಃ** **ಕಗ್ಗಲೀಪುರ ಪೋಲೀಸ್ ಠಾಣೆ**

**_ವಿರುದ್ಧ_**

**ಆರೋಪಿತರುಃ**

**ಎ.1) ಶಿವಬಸವೇಗೌಡ,**
**ಬಿನ್. ಬಸವರಾಜು,**
**ವರ್ಷ,**
**ವಾಸಃ ಸಂಃ 11, ಶಶಿಕಿರಣ ನಿಲಯ,**
**ಗಣಪತಿಪುರ, ಬೆಂಗಳೂರು.**

**ಸ್ವಂತ ವಿಳಾಸಃ**
**ಕಚುವನಹಳ್ಳಿ, ಸಾತನೂರು ಹೋಬಳಿ,**
**ಕನಕಪುರ ತಾಲ್ಲೂಕು, ರಾಮನಗರ,**
**ಬೆಂಗಳೂರು.**

**ಎ2) ರವಿ ಹೆಚ್.ಆರ್,**
**ಬಿನ್ ಲೇಟ್ ರಾಮಯ್ಯ,**
**ವರ್ಷ,**
**ವಾಸಃ ಐಡಿಯಾ ಸಿಮ್ ಪ್ರಮೋಟರ್,**
**ಸಂಃ 27, 1ನೇ ಕ್ರಾಸ್,**
**1ನೇ ಮೇನ್, ಅಂಜನಾನಗರ,**
**ಮಾಗಡಿ ರಸ್ತೆ, ಬೆಂಗಳೂರು.**

**ಸ್ವಂತ ವಿಳಾಸಃ**
**ಹೊಸಹಳ್ಳಿ, ಕಸಬಾ ಹೋಬಳಿ,**
**ಪಾಲ ಅಗ್ರಹಾರ ಅಂಚೆ, ಮಂಡ್ಯ.**

# ಆರೋಪಣೆ

ನಾನು ಶ್ರೀ ಮೋಹನ್ ಬಾಡಗಂಡಿ, ಬಿ.ಕಾಂ.,ಎಲ್.ಎಲ್.ಬಿ(ಸ್ಪೆಷಲ್), ಪೀಠಾಸೀನಾಧಿಕಾರಿ, 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ಈ ಕೇಸಿನ ಆರೋಪಿಯಾದ ನಿಮ್ಮ ಮೇಲೆ ಈ ದಿನ ದಿನಾಂಕ 04.11.2019 ರಂದು ಹೊರಿಸುವ ಆಪಾದನೆ ಏನೆಂದರೆ,

1ನೇ ಆರೋಪಿಯಾದ ನೀನು ಶೇಷಾದ್ರಿಪುರಂನಲ್ಲಿರುವ ಸ್ಕ್ಯಾನ್ ಸಿಟಿ ಇನ್‌ಫ್ರಾಸ್ಟ್ರಕ್ಚರ್ ಪ್ರೈ. ಲಿ. ಕಂಪನಿಯಲ್ಲಿ ಫೀಲ್ಡ್ ಎಕ್ಸಿಕ್ಯೂಟೀವ್ ಆಗಿ ಕೆಲಸ ಮಾಡುತ್ತಿದ್ದು ಅದೇ ಕಂಪನಿಯಲ್ಲಿ ಟೆಲಿಕಾಲರ್ ಆಗಿ ನೇತ್ರಾ/ಸಾಕ್ಷಿ 9 ರವರು ಕೆಲಸ ಮಾಡುತ್ತಿದ್ದು ಅವರನ್ನು ಪ್ರೀತಿಸುತ್ತಿರುವುದಾಗಿ ತಿಳಿಸಿದ್ದು ಆಕೆಯು ಪ್ರೀತಿಯನ್ನು ನಿರಾಕರಿಸಿ ತನ್ನ ಮನೆಯವರು ತೋರಿಸಿದ ಕೋಟಕ್ ಮಹೀಂದ್ರಾ ಬ್ಯಾಂಕಿನಲ್ಲಿ ಡೆಪ್ಯೂಟಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಮೃತ ಅನಿಲನೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡು ಮದುವೆಗೆ ದಿನಾಂಕ 21.01.2018 ರಂದು ನಿಗಧಿಯಾಗಿತ್ತು, ನಂತರ 1ನೇ ಆರೋಪಿಯಾದ ನೀನು ಸಾಕ್ಷಿ9 ಳನ್ನು ಬಿಟ್ಟಿರಲು ಸಾಧ್ಯವಾಗದೇ ಮೃತ ಅನಿಲ್ ನಿನಗಿಂತ ಮೇಲ್‌ಹಂತದ ಕೆಲಸದಲ್ಲಿರುವ ಕಾರಣ ಹಾಗೂ ಸಾಕ್ಷಿ 9 ರವರು ತನ್ನ ನಿಶ್ಚಿತಾರ್ಥದ ಫೋಟೋಗಳನ್ನು ಕಂಪನಿಯಲ್ಲಿರುವ ತನ್ನ ಸ್ನೇಹಿತರಿಗೆಲ್ಲಾ ತೋರಿಸಿ ಖುಷಿಯಾಗಿದ್ದ ಕಾರಣ ಅದನ್ನು ಸಹಿಸಲು ಸಾಧ್ಯವಾಗದೇ ಅನಿಲನನ್ನು ಕೊಲೆ ಮಾಡಿದರೆ ಸಾಕ್ಷಿ 9 ರವರು ವಿಧಿಯಿಲ್ಲದೇ ನೀನು ಹೇಳಿದಂತೆ ಕೇಳಿಕೊಂಡು ಇರುತ್ತಾಳೆ ಎಂದು ನಿರ್ಧರಿಸಿ ಸಂಚು ರೂಪಿಸಿಕೊಂಡು ಸಾಕ್ಷಿ 9 ರವರಿಗೆ ಗೊತ್ತಾಗದಂತೆ ಅವರ ಮೊಬೈಲ್‌ನಿಂದ ಮೊಬೈಲ್ ಸಂಃ 9343832763ನ್ನು ಸಂಗ್ರಹಿಸಿಕೊಂಡು ದಿಃ 08.07.2017 ರಂದು ಗಾಂಧಿಬಜಾರ್‌ನ ಯೂನಿವರ್ಸಲ್ ಮೊಬೈಲ್ ಅಂಗಡಿ ಬಳಿ ಸಿಮ್ ಪ್ರಮೋಟರ್ ಆಗಿದ್ದ 2ನೇ

ಆರೋಪಿಯ ಬಳಿ ಹೋಗಿ, ತನ್ನ ಬಳಿ ಇದ್ದ ಮಂಜುನಾಥ್ ಎಂಬ ಹೆಸರಿನ ಆಧಾರ್ ಕಾರ್ಡ್‌ನ ಪ್ರತಿಯನ್ನು ನೀಡಿ ಹೆಚ್ಚಿನ ಹಣ ಕೊಟ್ಟು ಹೊಸ ಸಿಮ್‌ನ್ನು ಕೊಡುವಂತೆ ಕೇಳಿದಾಗ 2ನೇ ಆರೋಪಿಯಾದ ನೀನು ಸರಿಯಾದ ದಾಖಲೆ ಮತ್ತು 1ನೇ ಆರೋಪಿಯ ಹೊಂದಾಣಿಕೆಯನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡದೇ ನಿರ್ಲಕ್ಷ್ಯ ವಹಿಸಿ ಹೆಚ್ಚಿನ ಹಣ ಪಡೆದು ಐಡಿಯಾ ಸಿಮ್ ಸಂಃ 9964244764 ಮಾರಾಟ ಮಾಡಿದ್ದೆ. 1ನೇ ಆರೋಪಿಯಾದ ನೀನು ಸಿಮ್‌ನ್ನು ಖರೀದಿಸಿದ ನಂತರ ಅದೇ ದಿನ ಕೆ.ಜಿ.ನಗರದ ಶ್ರೀ ಮಂಜುನಾಥ ಎಂಟರ್‌ಪ್ರೈಸಸ್ ಹೆಸರಿಗೆ ಸಾಕ್ಷಿ 13/ಮಂಜುನಾಥ ಜಿ ರವರಿಗೆ ಸೇರಿದ ಅಂಗಡಿಗೆ ಹೋಗಿ ಮೈಕ್ರೋಮ್ಯಾಕ್ಸ್ ಮೊಬೈಲ್‌ನ್ನು ಖರೀದಿ ಮಾಡಿ ಅದಕ್ಕೆ ಮೇಲ್ಕಂಡ ಸಿಮ್ಮನ್ನು ಅಳವಡಿಸಿಕೊಂಡು ಮೃತ ಅನಿಲನ ಮೊಬೈಲ್‌ಗೆ ಕರೆ ಮಾಡಿ ತಾನು ಹಾಸನದ ಯೋಗೇಶ ಎಂದು ಸುಳ್ಳು ಹೆಸರಿನಲ್ಲಿ ಪರಿಚಯ ಮಾಡಿ ಸ್ನೇಹ ಬೆಳೆಸಿ, ದಿಃ 14.11.2017 ರಂದು ಬಿ.ವಿ.ಕೆ ಅಯ್ಯಂಗಾರ್ ರಸ್ತೆಯಲ್ಲಿರುವ ಸಾಕ್ಷಿ 23 ರವರಿಗೆ ಸೇರಿದ ಲಕ್ಕಿ ಅಂಡ್ ಲಕ್ಕಿ ಅಂಗಡಿಯಲ್ಲಿ ವಿದ್ಯುತ್ ಶಾಕ್ ಹೊಡೆಯದ ಹಾಗೆ ರಬ್ಬರ್ ಗ್ಲೌಸ್‌ಗಳನ್ನು ಖರಿದಿ ಮಾಡಿ ಹಾಗೂ ದಿಃ 17.11.2017 ರಂದು ಬಿ.ವಿ.ಕೆ ಅಯ್ಯಂಗಾರ್ ರಸ್ತೆಯಲ್ಲಿರುವ ಮನೀಶ್ ಎಲೆಕ್ಟ್ರೋ ಕ್ಯಾಬ್ ಅಂಗಡಿ ಬಳಿ ಹೋಗಿ ಸಾಕ್ಷಿ20/ಮನೀಶ್ ದೋಶಿ ರವರಿಂದ 10 ಸ್ಕೇರ್‌ಮಿಲಿಮೀಟರ್‌ನ ಅಳತೆಯ 30 ಮೀಟರ್ ಎಲೆಕ್ಟ್ರಿಕ್ ವೈರನ್ನು ಖರೀದಿ ಮಾಡಿ ಅದರಲ್ಲಿ 20 ಮತ್ತು 10 ಮೀಟರ್‌ನ 2 ತುಂಡುಗಳನ್ನಾಗಿಸಿ ನಿನ್ನ ಬ್ಯಾಗಿನಲ್ಲಿ ಇಟ್ಟುಕೊಂಡಿದ್ದು, ದಿನಾಂಕಃ 03.12.2017 ರಂದು, ಮದ್ಯಾಹ್ನ ಸುಮಾರು 2.20 ಗಂಟೆ ಸಮಯ, ಕಗ್ಗಲೀಪುರ ಪೋಲಿಸ್ ಠಾಣಾ ಸರಹದ್ದು, ಉತ್ತರಿ ಗ್ರಾಮದ ಸರ್ವೆ ನಂಃ 113ರ ಗೋಮಾಳದ ಸ್ಥಳದಲ್ಲಿರುವ ಸ್ಮಶಾನ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, 1ನೇ ಆರೋಪಿಯಾದ ನೀನು ಮೃತ ಅನಿಲ್‌ನನ್ನು ಮದುವೆಯಾಗುವ ನೇತ್ರಾ/ಸಾಕ್ಷಿ 9 ಎಂಬ ಹುಡುಗಿ ನಿನ್ನ ಪ್ರೀತಿಯನ್ನು ನಿರಾಕರಿಸಿದ ಕಾರಣ ಮೃತ

ಅನಿಲನನ್ನು ಕೊಲೆ ಮಾಡಲು 2ನೇ ಆರೋಪಿ ನೀಡಿದ್ದ ನೀಡಿದ ಐಡಿಯಾ ಸಿಮ್‌ನ್ನು ಉಪಯೋಗಿಸಿದ್ದು ಹಾಗೂ 1ನೇ ಆರೋಪಿಯಾದ ನೀನು ಅನಿಲನನ್ನು ಪುಸಲಾಯಿಸಿ ನಂಬಿಸಿ ಸದರಿ ಸ್ಥಳಕ್ಕೆ ನಿನ್ನ ಯೂನಿಕಾರ್ನ್ ಬೈಕ್ ನಂಃ ಕೆಎ-50-ಕ್ಯೂ-6693ರಲ್ಲಿ ಕರೆದುಕೊಂಡು ಬಂದಿದ್ದು ಅಲ್ಲೇ ಪಕ್ಕದಲ್ಲಿದ್ದ 11 ಕೆ.ವಿ ಎಲೆಕ್ಟ್ರಿಕ್ ಕಂಬದ ಲೈನಿಗೆ ನೀನು ತಂದಿದ್ದ 10 ಸ್ಕೇರ್ ಮಿಲಿಮೀಟರ್‌ನ 20 ಮೀಟರ್ ವೈರಿನ ತುದಿಯನ್ನು ಮರದ ಗಳ ಬಳಸಿ ನೇತುಹಾಕಿ ನಿನ್ನ ಕೈಗೆ ರಬ್ಬರ್ ಗ್ಲೌಸ್‌ಗಳನ್ನು ಹಾಕಿಕೊಂಡು ವೈರಿನ ಮತ್ತೊಂದು ತುದಿಯನ್ನು ಚಿಕ್ಕ ಗಳಕ್ಕೆ ಸಿಗಿಸಿ ರೆಡಿಯಾಗಿಟ್ಟುಕೊಂಡು ಅನಿಲನಿಗೆ ಗೊತ್ತಾಗದಂತೆ ಹಿಂದಿನಿಂದ ಅವನ ತಲೆಗೆ ಜೋರಾಗಿ ತಾಗಿಸಿ ಹಿಡಿದುಕೊಂಡಾಗ ಅನಿಲನಿಗೆ ವಿದ್ಯುತ್ ಶಾಕ್ ಹೊಡೆದು ಕ್ಷಣಾರ್ಧದಲ್ಲಿ ನೆಲದ ಮೇಲೆ ಬಿದ್ದು ಸ್ಥಳದಲ್ಲೇ ಕೊಲೆಯಾಗಿ ಮತ್ತುಪಟ್ಟಿದ್ದು ಈ ಮೂಲಕ ಭಾ.ದಂ.ಸಂ.ಕಲಂ 302 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಮಾಡಿರುತ್ತೀರಿ, ಹಾಗೂ ಈ ನ್ಯಾಯಾಲಯದ ಸಂಜ್ಞೇಯಕದಲ್ಲಿರುತ್ತೀರಿ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ 1ನೇ ಆರೋಪಿಯಾದ ನೀನು ಮೃತ ಅನಿಲನನ್ನು ಕೊಲೆ ಮಾಡಿದ್ದು ನಂತರ ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಕೃತ್ಯಕ್ಕೆ ಉಪಯೋಗಿಸಿದ ಮೃತ ಅನಿಲನನ್ನು ಸಂಪರ್ಕಿಸಲು ಬಳಸಿದ ಮೇಲೆ ಹೇಳಿದ ಮೈಕ್ರೋಮ್ಯಾಕ್ಸ್ ಮೊಬೈಲ್, ಸಿಮ್‌ಕಾರ್ಡ್ ಇವುಗಳನ್ನು ಬೆಂಗಳೂರು ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ, ಸಲಕವಾರ ಗ್ರಾಮದ ಬಳಿ ಗಣಪತಿರಾಜ್ ರವರಿಗೆ ಸೇರಿದ ತೆಂಗಿನ ತೋಟದ ಪಕ್ಕದ ನಿರ್ಜನ ಸ್ಥಳದಲ್ಲಿ ಸುಟ್ಟು ಹಾಕಿದ್ದು ಈ ಮೂಲಕ ಭಾ.ದಂ.ಸಂ.ಕಲಂ 201 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಮಾಡಿರುತ್ತೀರಿ, ಹಾಗೂ ಈ ನ್ಯಾಯಾಲಯದ ಸಂಜ್ಞೇಯಕದಲ್ಲಿರುತ್ತೀರಿ.

ಸದರಿ ಆಪಾದನೆಯ ವಿಚಾರಣೆಯು ಈ ನ್ಯಾಯಾಲಯದಲ್ಲಿ ಜರುಗಬೇಕೆಂದು ನಿರ್ದೇಶಿಸುತ್ತೇನೆ.

ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದೆಯೆಂದು ದೃಢೀಕರಿಸುತ್ತೇನೆ.

(ಮೋಹನ್ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. 277/2018**

**ಫಿರ್ಯಾದುದಾರರುಃ ಕಗ್ಗಲೀಪುರ ಪೊಲೀಸ್ ಠಾಣೆ**

**_ವಿರುದ್ಧ_**

**ಆರೋಪಿತರುಃ**

**ಆರೋಪಿಯ ಹೇಳಿಕೆ ಪತ್ರ**

ಪ್ರಶ್ನೆ _ 1 ಃ ಓದಿ ಹೇಳಿ ವಿವರಿಸಿದ ಆಪಾದನೆ ತಿಳಿಯಿತೆ?
ಉತ್ತರ ಃ

ಪ್ರಶ್ನೆ _ 2 ಃ ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯನ್ನು ನಡೆಸಬೇಕೆನ್ನುವಿರೊ?
ಉತ್ತರ ಃ

ದಿನಾಂಕ 04.11.2019 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪಣೆಯನ್ನು ಓದಿ ತಿಳಿಸಿ, ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.

(ಮೋಹನ್ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಆರೋಪಿಯ ಸಹಿ